


## "ಪರಹಿತಾನಂದ"

*ಆತ್ಮಾರ್ಥಂ ಜೀವಲೋಕೇಽಸ್ಮಿನ್ ಕೋ ನ ಜೀವತಿ ಮಾನವಃ ।*
*ಪರಂ ಪರೋಪಕಾರಾರ್ಥಂ ಯೋ ಜೀವತಿ ಸ ಜೀವತಿ ॥*

"ಈ ಪ್ರಪಂಚದಲ್ಲಿ ತನಗಾಗಿ ಯಾವ ಮಾನವ ತಾನೆ ಜೀವಿಸುವುದಿಲ್ಲ! ಆದರೆ ಯಾರು ಪರೋಪಕಾರಕ್ಕಾಗಿ ಜೀವಿಸುವರೊ ಅವರ ಬದುಕೇ ಬದುಕು," ಎಂದು ಒಂದು ಸುಭಾಷಿತ ಹೇಳುತ್ತದೆ. ಇಂತಹ ಸಾರ್ಥಕ ಬದುಕನ್ನು ಬಾಳುವವರೂ ಈ ಸ್ಪರ್ಧಾತ್ಮಕ, ಹಣಪ್ರಧಾನ ಸಮಾಜದಲ್ಲಿ ಕೆಲವರಿದ್ದಾರೆ. ಸುರೇಶ ಕಾಮತ್ ಚೆನ್ನೈನಲ್ಲಿ ಒಬ್ಬ ವ್ಯಾಪಾರಿ. ಅವರ ಕಂಪನಿಯಲ್ಲಿ ೪೭೫ ಕೆಲಸಗಾರರಿದ್ದಾರೆ. ಅವರ ಪೈಕಿ ೪೦ ಮಂದಿ ಅಂಗವಿಕಲರು ಎಂದು ಕೇಳಿದರೆ ಆಶ್ಚರ್ಯವಾಗಬಹುದು.

ಎಸ್.ಎಂ. ಪಾರ್ಥಸಾರಥಿ ಹೆಳವರು. ಸುರೇಶ ಕಾಮತ್‌ರಲ್ಲಿಗೆ ಕೆಲಸಕ್ಕಾಗಿ ಬಂದರು. ಅವರ ಮೇಲಿನ ಕನಿಕರದಿಂದ ಅವರನ್ನು ಕೆಲಸಕ್ಕೆ ಸೇರಿಸಿಕೊಳ್ಳಲಾಯಿತು. ಪಾರ್ಥಸಾರಥಿ ತುಂಬ ಸಮರ್ಥ ರೀತಿಯಲ್ಲಿ ಕೆಲಸವನ್ನು ನಿರ್ವಹಿಸಿ ಸುರೇಶ ಕಾಮತರ ಭರವಸೆಗೆ ಪಾತ್ರರಾದರು. ಇದು ಸುರೇಶ ಕಾಮತ್‌ರನ್ನು ಇನ್ನೂ ಹೆಚ್ಚು ಅಂಗವಿಕಲರನ್ನು ಕೆಲಸಕ್ಕೆ ಸೇರಿಸಿಕೊಳ್ಳಲು ಪ್ರೇರೇಪಿಸಿತು. ಇದರಿಂದ ಅಂಗವಿಕಲರಿಗೂ ಸಹಾಯವಾದಂತಾಗುತ್ತದೆ ಮತ್ತು ವ್ಯಾಪಾರವೂ ಉತ್ತಮವಾಗುತ್ತದೆ ಎಂಬುದು ಅವರ ಲೆಕ್ಕಾಚಾರ. ಹೀಗೆ ಅವರು ಅತ್ಯಧಿಕ ಸಂಖ್ಯೆಯ ಅಂಗವಿಕಲರನ್ನು ಸೇರಿಸಿಕೊಂಡಿದ್ದಾರೆ. ಅಷ್ಟೇ ಅಲ್ಲ ಅಂಗವಿಕಲರಿಗಾಗಿಯೇ ರ್‍ಯಾಂಪುಗಳು, ವಿಶೇಷ ರೀತಿಯ ಟಾಯ್‌ಲೆಟ್‌ಗಳು ಮುಂತಾದ ಅನುಕೂಲತೆಗಳನ್ನು ಒದಗಿಸಿ ಕೊಟ್ಟಿದ್ದಾರೆ. ಈಗ ಹಿರಿಯ ಎಕ್ಸಿಕ್ಯೂಟಿವ್ ಆಗಿರುವ ಪಾರ್ಥಸಾರಥಿ ಹೇಳುತ್ತಾರೆ: "ಸುರೇಶ್ ನಮಗೆಲ್ಲ ಹಿರಿಯಣ್ಣ ಇದ್ದಹಾಗೆ. ನಾವು ಪ್ರತ್ಯೇಕ ಎಂಬ ಭಾವನೆಯೇ ನಮಗೆ ಬರದಂತೆ ಅವರು ನಮ್ಮನ್ನು ನೋಡಿಕೊಳ್ಳುತ್ತಾರೆ."

ಬೆಂಗಳೂರಿನ ವಿ.ಮಣಿಯವರು ಆರ್.ಬಿ.ಐ.ನ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಆಗಿ ನಿವೃತ್ತರಾದ ಬಳಿಕ ತಾವು ಗಳಿಸಿದ ಹಣದಿಂದ ತಮ್ಮ ಮನೆಯನ್ನೇ ಜೈಲಿನಲ್ಲಿರುವ ಅಪರಾಧಿಗಳ ಮಕ್ಕಳಿಗಾಗಿ ಒಂದು ಹಾಸ್ಟೆಲ್ ಆಗಿ ಪರಿವರ್ತಿಸಿದ್ದಾರೆ. ಅವರು, ಅವರ ಪತ್ನಿ ಮತ್ತು ಐದು ಮಂದಿ ಸಮಾಜಸೇವಕರು ಸೇರಿ ಈಗ ೩೧ ಮಕ್ಕಳನ್ನು ನೋಡಿಕೊಳ್ಳುತ್ತಿರುವರು. ಅವರಿಗೆ ಊಟ ವಸತಿಗಳನ್ನು ನೀಡುವುದು ಮಾತ್ರವಲ್ಲದೆ ಅವರು ಒಳ್ಳೆಯ ಶಾಲೆಯಲ್ಲಿ ಓದುವಂತೆಯೂ ಮಣಿ ನೋಡಿಕೊಳ್ಳುತ್ತಾರೆ. ಜೈಲಿನಲ್ಲಿ ಕೊಳೆಯುತ್ತಿರುವವರ ಮಕ್ಕಳ ಮುಂದಿನ ಭವಿಷ್ಯವನ್ನು ಕುರಿತು ಚಿಂತಿತರಾದ ಶ್ರೀಮಣಿಯವರು ಈ ಸೇವಾಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವರು. (ನೋಡಿ, *Readers' Digest* ಜೂನ್, ೨೦೦೩ರ ಸಂಚಿಕೆ). *ಹಿಂಸಾಚಾರ, ಭ್ರಷ್ಟಾಚಾರಗಳ ವಾತಾವರಣದಲ್ಲಿ ಇಂತಹ "ಪರಹಿತಾನಂದ"ರನ್ನು ಕಾಣುವುದು ಎಂಥ ಹಿತಕರ ಅನುಭವ!* ❖

## ಮಕ್ಕಳ ಶೀಲಸೌರಭ

***ಈ*** ದೇಹ ಗಾಳಿ, ಬೆಳಕು, ಆಹಾರಗಳನ್ನು ಸ್ವೀಕರಿಸಿ ಬೆಳೆಯುವಂತೆ ವ್ಯಕ್ತಿತ್ವವು ಅನುಭವದ ಮೂಲಕ ಬೆಳೆಯುತ್ತದೆ. ಆದ್ದರಿಂದ ಚಿಕ್ಕ ಮಕ್ಕಳು ಯೋಗ್ಯ ವ್ಯಕ್ತಿಗಳಾಗಿ ಬೆಳೆಯಲು ಅವರು ಎಂಥ ಅನುಭವಗಳಿಗೆ ತಮ್ಮನ್ನು ತೆರೆದುಕೊಳ್ಳಬೇಕು ಎಂಬುದು ತಂದೆತಾಯಿಗಳ ಜವಾಬ್ದಾರಿ. ಮನೆಯಲ್ಲಿ ಮಕ್ಕಳು ಬೆಳಗ್ಗೆ ಏಳುತ್ತಿದ್ದಂತೆಯೇ ತಂದೆತಾಯಿಗಳು ಜಗಳವಾಡುವುದನ್ನೇ ನೋಡಬೇಕಾದಂತಹ ಸನ್ನಿವೇಶದಲ್ಲಿ ಮಕ್ಕಳು ಬೆಳೆದರೆ ಅವರು ಪ್ರತಿಯೊಂದಕ್ಕೂ ಜಗಳಕಾಯುವ ಪ್ರವೃತ್ತಿಯನ್ನೇ ಬೆಳೆಸಿಕೊಳ್ಳುತ್ತಾರೆ. ಅವರಿಗೆ ತಿಳಿಯದ ರೀತಿಯಲ್ಲಿ ಬಾಹ್ಯ ಸನ್ನಿವೇಶಗಳು ಅವರ ಮೇಲೆ ಪ್ರಭಾವ ಬೀರುತ್ತಿರುತ್ತವೆ.

ಪತಿಪತ್ನಿಯರು ಪರಸ್ಪರ ಹೇಗೆ ವರ್ತಿಸುತ್ತಾರೆ, ನಿರ್ಣಯಕ್ಕೆ ಹೇಗೆ ಬರುತ್ತಾರೆ, ಪರಸ್ಪರ ಹೇಗೆ ಪ್ರೀತಿ ತೋರಿಸುತ್ತಾರೆ ಇತ್ಯಾದಿಗಳು ಮಾನವೀಯ ಸಂಬಂಧವನ್ನು ಬೆಳೆಸಿಕೊಳ್ಳಲು ನೀಲಿನಕ್ಷೆ (blueprint)ಯಾಗುತ್ತದೆ, ಎಂದು ಜುಡಿತ್ ಸೀಗಲ್ ಹೇಳುತ್ತಾರೆ. ಪತಿಪತ್ನಿಯರ ಸಂಬಂಧ ಮಕ್ಕಳ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂಬುದು ನಿಶ್ಚಯ. ಪತಿಪತ್ನಿಯರ ಸಂಬಂಧ ಸರಿಯಿಲ್ಲದಿದ್ದರೆ ಮಕ್ಕಳ ನಡವಳಿಕೆಯಲ್ಲಿ ಕುಂದುಕೊರತೆ ಕಾಣಿಸಿಕೊಳ್ಳುತ್ತದೆ ಹಾಗೂ ಅವರ ಆರೋಗ್ಯವೂ ಕೆಡುತ್ತದೆ ಎಂದು ಅವರು ಅಭಿಪ್ರಾಯಪಡುತ್ತಾರೆ.

"ತಂದೆತಾಯಿಗಳು ಮಾತನಾಡುವುದನ್ನು ಕೇಳಿಯೇ ಮಕ್ಕಳು ನಿರ್ಣಯತಂತ್ರವನ್ನು ಕಲಿಯುತ್ತಾರೆ" ಎಂದು ಕ್ಲಿನಿಕಲ್ ಸೈಕಾಲಜಿ ಪ್ರೊಫೆಸರ್ ಕ್ಯಾಥೆರಿನ್ ಲೀ ಹೇಳುತ್ತಾರೆ. ಮಕ್ಕಳ ಮುಂದೆ ಹೇಗೆ ವರ್ತಿಸಬೇಕೆಂಬುದನ್ನು ತಂದೆತಾಯಿಗಳು ಚೆನ್ನಾಗಿ ಅರಿತಿರಬೇಕು. ಒಂದು ವೇಳೆ ಜಗಳವಾಡಬೇಕಾದ ಸನ್ನಿವೇಶ ಬಂದರೂ ಮಕ್ಕಳಿಗೆ ಗೊತ್ತಾಗದ ಜಾಗದಲ್ಲಿ ಹೋಗಿ ಜಗಳವಾಡುವುದು ಉತ್ತಮ. (ನೋಡಿ, *Readers' Digest*, ಜೂನ್, ೨೦೦೩)

ಮಕ್ಕಳಿಗೆ ತಂದೆತಾಯಿಗಳೇ ಸರ್ವಸ್ವ. ಮಕ್ಕಳು ಜೀವನ ಪಾಠವನ್ನು ಕಲಿಯುವುದೇ ಅವರಿಂದ. ಆದ್ದರಿಂದ ಅವರು ಒಂದು ಮಾದರಿಯ ಜೀವನ ನಡೆಸುವುದು ಅತ್ಯಾವಶ್ಯಕ. ತಂದೆತಾಯಿಗಳು ಏನಾಗಿದ್ದಾರೆ ಎಂಬುದು ಅವರು ಮಕ್ಕಳಿಗೆ ಏನು ಕೊಡುತ್ತಾರೆ ಎಂಬುದಕ್ಕಿಂತ ಮುಖ್ಯ.

ಮಕ್ಕಳನ್ನು ಬೆಳೆಸುವುದೆಂದರೆ ಸೂರ್ಯನ ಬೆಳಕಿನಿಂದ ಹೂ ಅರಳುವಂತೆ. ಸೂರ್ಯನು ತನ್ನ ಪಾಡಿಗೆ ತಾನು ಬೆಳಗುತ್ತಿರುತ್ತಾನೆ. ಹೂವು ಅದನ್ನು ನೋಡಿ ಸುಂದರವಾಗಿ ಅರಳಿ ಸುವಾಸನೆಯನ್ನು ಬೀರುತ್ತದೆ. ಹಾಗೆಯೇ ತಂದೆತಾಯಿಗಳು ಚಾರಿತ್ರ್ಯಶುದ್ಧಿಯಿಂದ ಬೆಳಗುತ್ತಿರಬೇಕು. ಮಕ್ಕಳು ಆ ಬೆಳಕಿನಡಿಯಲ್ಲಿ ಅರಳಿ ಶೀಲ ಸೌರಭವನ್ನು ಸುತ್ತಲೂ ಹರಡುತ್ತಾರೆ. ❖